(1)

# ಬೆಂಗಳೂರು ನಗರ ಜಿಲ್ಲಾ ಪಂಚಾಯತ್

ಉಪನಿರ್ದೇಶಕರ ಕಛೇರಿ, ಸಾರ್ವಜನಿಕಶಿಕ್ಷಣ ಇಲಾಖೆ, ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯ, ಬೆಂಗಳೂರು-02

ಸಂಖ್ಯೆ: ಲೆಪ1 (ಅನು5)/ಕಿ.ಪ್ರಾ.ಶಾ.ಅನು/85/2014-15

ದಿನಾಂಕ: 31.03.2015

ನಮೂನೆ-2

(ನಿಯಮ 3 ರ ಉಪ-ನಿಯಮ 5 (ಬಿ))

ಪ್ರಮಾಣ ಪತ್ರದ ಸಂಖ್ಯೆ: 21/2015-16

ಲರ್ನಿಂಗ್ ಲೀಡರ್‌ಶಿಪ್ ಫೌಂಡೇಶನ್(ರಿ), ನಂ.16, 80 ಅಡಿ ರಸ್ತೆ, 4ನೇ ಬ್ಲಾಕ್ ಕೋರಮಂಗಲ, ಬೆಂಗಳೂರು-560034 ಈ ಗವರ್ನಿಂಗ್ ಕೌನ್ಸಿಲ್‌ಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಕ್ಟ್ ಸಂಖ್ಯೆ: 01 ರ 1995) ಸೆಕ್ಷನ್ 31 ರಂತೆ ಈ ದಿನ ಅಂದರೆ ದಿನಾಂಕ: 31.03.2015 (ಮೂವತ್ತೊಂದು ಮೂರು ಎರಡು ಸಾವಿರದ ಹದಿನೈದು) ರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ಶಾಶ್ವತ ಅನುದಾನವಿಲ್ಲದೇ ಕನ್ನಡ ಮಾಧ್ಯಮದಲ್ಲಿ ನಡೆಸಲು ಅನುಮತಿ ನೀಡಿ ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಿದೆ.

| | | |
|---|---|---|
| 01 | ಕ್ರಮ ಸಂಖ್ಯೆ | 23/2015-16 |
| 02 | ಶಾಲೆಯ ಹೆಸರು/ವಿಳಾಸ | ಪಿ.ಎಸ್.ಬಿ.ಬಿ. ಲರ್ನಿಂಗ್ ಲೀಡರ್‌ಶಿಪ್ ಅಕಾಡೆಮಿ<br>ಸರ್ವೆ ನಂ.52, ಲಕ್ಷ್ಮೀಪುರ ವಿಲೇಜ್, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು |
| 03 | ಅನುಮತಿ ನೀಡಿದ ತರಗತಿ | 1 ರಿಂದ 5ನೇ ತರಗತಿವರೆಗೆ |
| 04 | ಪ್ರಾರಂಭಿಸಬೇಕಾದ ತರಗತಿಗಳು<br>ಹಾಗೂ ಶೈಕ್ಷಣಿಕ ವರ್ಷ | 1 ರಿಂದ 5ನೇ ತರಗತಿವರೆಗೆ<br>2015-16ನೇ ಸಾಲಿನಿಂದ |
| 05 | ಅನುಮತಿ ನೀಡಿದ ಮಾಧ್ಯಮ | ಕನ್ನಡ ಮಾಧ್ಯಮ ಶಾಶ್ವತ ಅನುದಾನ ರಹಿತವಾಗಿ |
| 06 | ನೋಂದಣೀ ಶುಲ್ಕ ಪಾವತಿಸಿದ ವಿವರ | ಡಿ.ಡಿ.ಸಂ: 675216, ದಿನಾಂಕ: 26.11.2014<br>ರೂ. 25,000/= (ಇಪ್ಪತ್ತೈದು ಸಾವಿರ ರೂಗಳು ಮಾತ್ರ), ವಿಜಯ ಬ್ಯಾಂಕ್, ಬೆಂಗಳೂರು |
| 07 | ಸಂಸ್ಕರಣ ಶುಲ್ಕ ಪಾವತಿ ವಿವರ | ಡಿ.ಡಿ.ಸಂ: 675217, ದಿನಾಂಕ: 26.11.2014<br>ರೂ. 10,000/= (ಹತ್ತು ಸಾವಿರ ರೂಗಳು ಮಾತ್ರ), ವಿಜಯ ಬ್ಯಾಂಕ್, ಬೆಂಗಳೂರು |
| 08 | ಶಿಫಾರಸ್ಸು ಮಾಡಿದ ಅಧಿಕಾರಿಗಳ ಹೆಸರು/ಪದನಾಮ | ಶ್ರೀ ಡಿ.ಆರ್. ರಾಮಮೂರ್ತಿ<br>ಕ್ಷೇತ್ರ ಶಿಕ್ಷಣಾಧಿಕಾರಿಗಳು,<br>ಸಾರ್ವಜನಿಕ ಶಿಕ್ಷಣ ಇಲಾಖೆ, ಆನೇಕಲ್ ತಾ:<br>ಶ್ರೀ ರಾಘವೇಂದ್ರ ಸ್ವಾಮಿ<br>ವಿಷಯ ಪರಿವೀಕ್ಷಕರು<br>ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು(ದ)ಜಿಲ್ಲೆ |

ಸರ್ಕಾರಿ ಆದೇಶ ಸಂಖ್ಯೆ: ಇಡಿ1 ಪಿ.ಜಿ.ಸಿ. 2002, ಬೆಂಗಳೂರು ದಿ:10.06.2003ರನ್ವಯ, ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ 23 ಪುಟ 340 ಮತ್ತು 341 ಸಂಪುಟ 01ರಲ್ಲಿ ಈ ಕಛೇರಿಯಲ್ಲಿ ಶೈಕ್ಷಣಿಕ ಸಂಸ್ಥೆಗಳ ನೊಂದಣಿ ವಹಿಯಲ್ಲಿ ನೊಂದಾಯಿಸಲಾಗಿದೆ. ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ.

1. ಈ ನೋಂದಾವಣೆಯು ನಿಯಮ 3(5)(4) ಕ್ಕೆ ಒಳಪಟ್ಟಿರುತ್ತದೆ.
2. ಗರ್ವನಿಂಗ್ ಕೌನ್ಸಿಲ್ ಇವರು ನಿಯಮ 4(4) ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
3. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ ಪಾಠ - ಪಿಠೋಪಕರಣಗಳು ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ
4. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
5. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಆಡಳಿತ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿಯೇ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರ/ಇಲಾಖೆಯ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸತಕ್ಕದ್ದಲ್ಲ.
6. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದ್ದಾಗ್ಗೆ ಹೊರಡಿಸುವ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು.

7. ಇಲಾಖೆ ಹಾಗೂ ಸರ್ಕಾರ ನಿಗಧಿಪಡಿಸಿದ ಪಠ್ಯ ಮತ್ತು ಪುಸ್ತಕ ಪರೀಕ್ಷಾ ಕ್ರಮ ಇತ್ಯಾದಿ, ತಪ್ಪದೇ ಅಳವಡಿಸತಕ್ಕದ್ದು.
8. ಶಾಲೆಯನ್ನು ನೊಂದಣಿ ಮಾಡಿದ ಮೂರು ತಿಂಗಳೊಳಗೆ ಸಂಬಂಧಿಸಿದ ಅಧಿಕಾರಿಗಳಿಂದ ಮಾನ್ಯತೆ ನವೀಕರಿಸಿಕೊಳ್ಳುವುದು.
9. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಪಾಲಿಸತಕ್ಕದ್ದು.
10. ಶಾಲೆಗೆ ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು ಮತ್ತು ಶಿಕ್ಷಕರುಗಳಿಗೆ ಹಾಗೂ ಸಿಬ್ಬಂಧಿಗಳಿಗೆ ಸೇವಾ ಭದ್ರತೆ ಒದಗಿಸುವುದು ಕಡ್ಡಾಯವಾಗಿರುತ್ತದೆ.
11. ಪ್ರತಿ ವರ್ಷವೂ ವಿದ್ಯಾರ್ಥಿಗಳಿಗ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
12. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ, ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒದಗಿಸತಕ್ಕದ್ದು. ಇಲ್ಲದಿದ್ದಲ್ಲಿ ನೊಂದಣಿಯನ್ನು ರದ್ದುಗೊಳಿಸಲಾಗುವುದು.
13. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮ್ಮದಂತೆ ಪಾಲಿಸತಕ್ಕದ್ದು.
14. ಶಾಲೆಯನ್ನು 1 ರಿಂದ 5ನೇ ತರಗತಿಯವರೆಗೆ ಇತ್ತೀಚಿನ ಭಾಷಾ ನಿತಿಯಂತೆ ಕನ್ನಡ ಮಾಧ್ಯಮದಲ್ಲಿ/ಮಾತೃಭಾಷೆಯಲ್ಲಿ ನಡೆಸುವುದಾಗಿ ನೋಟರಿಯವರಿಂದ ದೃಡೀಕರಿಸಿ ಪ್ರಮಾಣ ಪತ್ರವನ್ನು ನೀಡುವುದು.
15. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೊಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಈ ಕ್ಚೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಂತಾನೇ ರದ್ದಾಗುವುದು.
16. ಶಾಲೆಯು ಯಾವುದೇ ಸಂದರ್ಭದಲ್ಲಿ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಚಿತಿಲ್ಲ.
17. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8 ರ ಅಡಿಯಲ್ಲಿ ಉಪಬಂಧ 36–37 ರಂತೆ ನೊಂದಾಯಿಸಿದ ಎಲ್ಲಾ ಶಾಲೆಗಳು ರೆಕಗ್ನಿಷನ್ ಹಾಗೂ ಪ್ರಾವಿಷನಲ್ ರೆಕಗ್ನಿಷನ್ ವ್ಯಾಪ್ತಿಗೆ ಬರುವುದು.
18. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಂಸ್ಥೆಗಳ ನೌಕರ ನೇಮಕಾತಿ, ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮ 1999 ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು. ಶಿಕ್ಷಕರುಗಳಿಗೆ ಸೇವಾ ವಹಿ ಪ್ರಾರಂಭಿಸಿ, ಬ್ಯಾಂಕ್ ಮೂಲಕ ವೇತನ ನೀಡುವುದು ಹಾಗೂ ಸೇವಾ ಭದ್ರತೆ ಕಲ್ಪಿಸುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.
19. ಶಾಲೆಯ ಸ್ಥಿರನಿಧಿಯನ್ನು ನಿಯಮಾನುಸಾರ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಆನೇಕಲ್ ತಾ: ಬೆಂಗಳೂರು ದಕ್ಷಿಣ ಜಿಲ್ಲೆ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಯವರ ಜಂಟಿ ಖಾತೆಯಲ್ಲಿಡಬೇಕು.
20. ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಹಾಗೂ ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು.
21. ಶಾಲೆಯ ಕಟ್ಟಡ ಹಾಗೂ ಆವರಣವನ್ನು ಬೆಂಕಿ ಅಪಘಾತ, ವಿದ್ಯುತ್ ಅಪಘಾತ, ಮತ್ತಿತರ ಅವಘಡಗಳಿಂದ ವಿದ್ಯಾರ್ಥಿಗಲಿಗೆ ಹಾಗೂ ಶಿಕ್ಷಕರಿಗೆ ಮತ್ತು ಸಿಬ್ಬಂದಿಗೆ ಸುರಕ್ಷಿತವಾಗಿರುವಂತೆ ವ್ಯವಸ್ಥೆ ಮಾಡುವುದು. ಕಟ್ಟಡ ಸುರಕ್ಷತೆ ಬಗ್ಗೆ ಸರ್ವೋಚ್ಚ ನ್ಯಾಯಾಲದಲ್ಲಿ ಪ್ರಕರಣ ಸಂಖ್ಯೆ: 483/2004, ದಿ: 13.04.2009 ರಲ್ಲಿ ನೀಡಿರುವ ನಿರ್ದೇಶನವನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
22. ಪ್ರತಿ ವರ್ಷ ಶಾಲೆಯ ದಾಖಲಾತಿಯನ್ನು ಏಪ್ರಿಲ್ 10 ರ ಣಮತರ ಪ್ರಾರಂಭಿಬೇಕು. ಸರ್ಕಾರದ ಮೀಸಲಾತಿ ನಿಯಮವನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಸ್ಥಳೀಚುರಿಗೆ ಸಾಖಲಾತಿಯಲ್ಲಿ ಆದ್ಯತೆ ನೀಡತಕ್ಕದ್ದು.
23. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009 ಅಧಿನಿಯಮದ ಪ್ರಕಾರ ಮತ್ತು ನಿಯಮಾನುಸಾರ ದಾಖಲು ಮಾಡಿಕೊಳ್ಳತಕ್ಕದ್ದು.

ದಿನಾಂಕ: 31.03.2015
ಸ್ಥಳ: ಬೆಂಗಳೂರು

(ಕೆ. ಪದ್ಮಾವತಿ)
ಉಪನಿರ್ದೇಶಕರು(ಆಡಳಿತ)
ಬೆಂಗಳೂರು, ದಕ್ಷಿಣ ಜಿಲ್ಲೆ

ಪ್ರತಿ:

1. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಆನೇಕಲ್ ತಾ: ಬೆಂಗಳೂರು
2. ಕಾರ್ಯದರ್ಶಿಗಳು, ಲರ್ನಿಂಗ್ ಲೀಡರ್‌ಶಿಪ್ ಫೌಂಡೇಶನ್(ರಿ), ನಂ.16, 80 ಅಡಿ ರಸ್ತೆ, 4ನೇ ಬ್ಲಾಕ್ ಕೋರಮಂಗಲ, ಬೆಂಗಳೂರು–560034
3. ಕಛೇರಿ ಪ್ರತಿ

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಆನೇಕಲ್ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ–562106

ಸಂಖ್ಯೆ ಅ1/ಖಾಪ್ರಾಶಾ/ಪ್ರ.ಮಾ./ಮಾನ್ಯತೆ/46/2020–21

ದಿನಾಂಕ: 07/10/2020

ನಮೂನೆ–3 (ನಿಯಮ–7)

ಕರ್ನಾಟಕ ಶಿಕ್ಷ ಣ ಕಾಯಿದೆ ನಿಯಮ 36(6)(ಬಿ) ರಂತೆ ಶಿಕ್ಷಣ ಸಂಸ್ಥೆಗಳ ಮಾನ್ಯತೆ ಪ್ರಮಾಣ ಪತ್ರ

ಲರ್ನಿಂಗ್ ಲೀಡರ್‌ಶಿಪ್ ಫೌಂಡೇಶನ್ (ರಿ) ನಂ.16, 80 ಅಡಿ ರಸ್ತೆ, 4ನೇ ಬ್ಲಾಕ್, ಕೋರಮಂಗಲ, ಬೆಂಗಳೂರು –560034 ಈ ಆಡಳಿತ ಮಂಡಲಿ ವತಿಯಿಂದ ನಡೆಯುತ್ತಿರುವ ಪಿಎಸ್‌ಬಿಬಿ ಲರ್ನಿಂಗ್ ಲೀಡರ್‌ಶಿಪ್ ಅಕಾಡೆಮಿ ಸರ್ವೆ ನಂ.52, ಲಕ್ಷ್ಮೀಪುರ ವಿಲೇಜ್, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಶಾಲೆಗೆ ಶಿಕ್ಷಣ ಸಂಯೋಜಕರು ಖುದ್ದು ಭೇಟಿ ನೀಡಿ ವರದಿ ಸಲ್ಲಿಸಿರುವುದನ್ನು ಆದರಿಸಿ, ಸದರಿ ಶಾಲೆಗೆ ಮಾನ್ಯತೆಯನ್ನು ಶಾಶ್ವತ ಅನುದಾನರಹಿತವಾಗಿ (without–Aid) ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ನಿಬಂಧನೆ ಮೇರೆಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 36 (6) (ಬಿ) ರಂತೆ ಪ್ರಥಮ ಮಾನ್ಯತೆ /ಮಾನ್ಯತೆ ನೀಡಲಾಗಿದೆ. ಈ ಕೆಳಕಂಡ ಷರತ್ತುಗಳಲ್ಲಿ ಯಾವುದೊಂದನ್ನು ಪೂರೈಸದೆ ಇದ್ದಲ್ಲಿ ಈ ಮಾನ್ಯತೆಯು ತಂತಾನೆ ರದ್ದಾಗುತ್ತದೆ.

| ನೊಂದಣಿ ಸಂಖ್ಯೆ ಮತ್ತು ಪ್ರಾಧಿಕಾರದ ಹೆಸರು | ಶಾಲೆಯ ಹೆಸರು ಮತ್ತು ವಿಳಾಸ | ಮಾನ್ಯತೆ ನೀಡಿದ ತರಗತಿ, ಮಾಧ್ಯಮ ಮತ್ತು ವಿಭಾಗಗಳು, ಅನುದಾನ ರಹಿತ/ಸಹಿತ | ಮಾಧ್ಯಮ | ಶಾಲೆಯ ಮಾನ್ಯತೆ ಬಗ್ಗೆ ಪರಿಶೀಲಿಸಿದ ಪರಿಶೀಲನಾಧಿಕಾರಿಯವರ ಹೆಸರು |
|---|---|---|---|---|
| ಉಪನಿರ್ದೇಶಕರು ಸಾ.ಶಿ.ಇ ಪ್ರಪತ್ರ ಸಂಖ್ಯೆ ಲೆಪ1/(ಅನು5)/ಕಿ.ಪ್ರಾ.ಶಾ.ಅನು/ 85/2014–15/ದಿ31.03.2015 | ಪಿಎಸ್‌ಬಿಬಿ ಲರ್ನಿಂಗ್ ಲೀಡರ್‌ಶಿಪ್ ಅಕಾಡೆಮಿ ಸರ್ವೆ ನಂ.52, ಲಕ್ಷ್ಮೀಪುರ ವಿಲೇಜ್, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, | 1 ರಿಂದ 5ನೇ ತರಗತಿಗಳಿಗೆ 2015– 16ನೇ ಸಾಲಿಗೆ ಪ್ರಥಮ ಮಾನ್ಯತೆ ಹಾಗೂ 2016–17ನೇ ಸಾಲಿನಿಂದ 2019–20ನೇ ಸಾಲಿನ ವರೆಗೆ ಮಾನ್ಯತೆಯನ್ನು ಶಾಶ್ವತ ಅನುದಾನರಹಿತವಾಗಿ (without-Aid) ತಲಾ ಒಂದು ವಿಭಾಗದಂತೆ ನವೀಕರಿಸಿದೆ. | ಕನ್ನಡ ಮಾಧ್ಯಮ | ಶ್ರೀ ಸಾಧಿಕ್ ಅಹಮದ್ ಶಿಕ್ಷಣ ಸಂಯೋಜಕರು (ಪ್ರೌಢ) |
| ಸರ್ಕಾರದ ಆದೇಶ ಸಂಖ್ಯೆ:ಇಡಿ709ಪಿಜಿಸಿ2017 ದಿನಾಂಕ:07/03/2018 ರನ್ವಯ ರೂ.5,000/– ಪ್ರೊಸೆಸಿಂಗ್ ಶುಲ್ಕವನ್ನು ನೆಟ್ ಬ್ಯಾಂಕಿಂಗ್ ಮೂಲಕ ದಿ: 31/07/2020 ರಂದು ಪಾವತಿಸಿರುತ್ತಾರೆ. | | | | |

ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಮಾನ್ಯತೆ ನೀಡಿದೆ

1. ಕರ್ನಾಟಕ ಶಿಕ್ಷಣ ಕಾಯ್ದೆ 1983 ಕರ್ನಾಟಕ ಆಕ್ಟ್ 1 ಆಫ್ 1995 ರ ನಿಯಮಗಳು ಹಾಗೂ ಸರ್ಕಾರಿ ಮತ್ತು ಇಲಾಖೆಯಿಂದ ಕಾಲಕಾಲಕ್ಕೆ ನೀಡುವ ಸುತ್ತೋಲೆ ಹಾಗೂ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರಬೇಕು.
2. ಕರ್ನಾಟಕ ಶಿಕ್ಷಣ ಸಂಸ್ಥೆಗಳು, ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವನ್ನು ನಿಗಧೀಕರಣ ನಿಯಮಾವಳಿಗಳು 1995 ರ ಸರ್ಕಾರಿ ಅಧಿಸೂಚನೆ ಸಂಖ್ಯೆ: 116 ವಿವಿಧ 95 ದಿನಾಂಕ: 14–11–95 ರ ನಿಯಮ 4, 5, 6 ಮತ್ತು 8 ರನ್ವಯ ರಾಜ್ಯಪಠ್ಯಕ್ರಮ ಶಾಲಾ ಸುರಕ್ಷತೆ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಿರತಕ್ಕದ್ದು.
3. ಕರ್ನಾಟಕ ತಣ ಕಾಯ್ದೆ 1983 ಕರ್ನಾಟಕ ಆಕ್ಟ್ 1 ಆಫ್ 1995 ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು, ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ 'ನಿಯಮಾವ: ಳಿಗಳು 1995 ರ ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 116 "ವಿವಿಧ 95 ದಿನಾಂಕ: 14–11–95 ರ ನಿಯಮ 19 ರಂತೆ ಬೋಧನಾ ಶುಲ್ಕ, ವಿಶೇಷ ಅಭಿವೃದ್ಧಿ ಶುಲ್ಕಗಳನ್ನು ಮಾತ್ರ ವಸೂಲಿ ಮಾಡುತ್ತಿರಬೇಕು ಹಾಗೂ ನಿಯಮ 19 (4) ರಂತೆ ಕ್ರಮವಹಿಸಿರಬೇಕು.
4. ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ ಟಿ ಕು ರಂತೆ ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ನಡೆಸಿರಬೇಕು. ಅನುಮತಿ ನೀಡಿದ 5 ವರ್ಷಗಳವರೆಗೆ, ಶಾಲಾ ಸ್ಥಳಾಂತರ ಮತ್ತು ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ. ಸಾಮಾನ್ಯವಾಗಿ ಒಂದು ಸಲ ಮಾತ್ರ ಸ್ಥಳಾಂತರಕ್ಕೆ ಮಾತ್ರ ಅವಕಾಶವಿರುತ್ತದೆ. ಒಂದು ವೇಳೆ ಈ ಅವಧಿಯ ನಂತರ ಸ್ಥ ಸ್ಥಳಾಂತರ/ಸಸ್ತಾಂತರ ಮಾಡಿಸಲಿಚ್ಚಿಸಿದಲ್ಲಿ ಹೊಸ ಸ್ಥಳದಲ್ಲಿ ಹೊಸದಾಗಿ ನೊಂದಣಿ ಮಾನ್ಯತೆಯನ್ನು ಪಡೆಯತಕ್ಕದ್ದು.
5. ಕರ್ನಾಟಕ ರಾಜ್ಯದ ಸಂಘದ ನೊಂದಣಿ ಕಾಯ್ದೆ 21 1960 ಕ್ರಮ ಸಂಖ್ಯೆ 9 1957 ಅಧಿನಿಯಮ 13 ರ ಪ್ರಕರಣದಂತೆ ಹಿಂದಿನ ಸಾಲಿನವರೆಗಿನ ಲೆಕ್ಕ ಪತ್ರಗಳನ್ನು (ಮಾರ್ಚ 31 ರವರೆಗೆ) ಸಂಘಗಳ ನೊಂದಣಾಧಿಕಾರಿಗಳಿಗೆ 'ಸಿಲಸಿ ದಾಸ್ತಾವೇಜುಗಳನ್ನು ದಾಖಲು ಪಡಿಸಿರಬೇಕು. ಹಾಗೂ ಸದರಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿಯ ದಾಖಲೆಗಳನ್ನು ಅನುಮೋದಿಸಿಕೊಂಡು ಸ್ವೀಕೃತಿ ಹಾಗೂ ಅನುಮೋದನಾ ಪಟ್ಟಿಯನ್ನು ಪರಿಶೀಲನೆಗೆ ಕಾಯ್ದಿರಿಸಬೇಕು.
6. ಶಿಕ್ಷಣ ಕಾಯ್ದೆ 1983 ಸರ್ಕಾರದ ಅಧಿಸೂಚನೆ ಇಡಿ 131 ವಿವಿಧ 98 ದಿನಾಂಕ: 94–11–99 ರ ಮಾನ್ಯತೆ ನಿಯಮ 1999 ರ ನಿಯಮ 3 ಉಪನಿಯಮ 2 ರಂತೆ ಹಾಗೂ ನಿರ್ದೇಶಕರು ಪ್ರೌಢ ಶಿಕ್ಷಣ ರವರ ಸುತ್ತೋಲೆ ಸಂಖ್ಯೆ: ಸಿ (4) (7) ಶಾ.ಶಿ.ಅ.ನಿ.ಅ/91/02–03 ದಿನಾಂಕ : 13–12–02ರ ನಿಯಮಗಳಂತೆ ಸ್ಥಿರನಿಧಿ ಠೇವಣಿಗಳನ್ನು ನಿಗಧಿಪಡಿಸಿರುವ ದರಗಳಲ್ಲಿ ಆಡಳಿತ ಮಂಡಳಿ ಕಾರ್ಯದರ್ಶಿಗಳು ಹಾಗೂ ಸೂಚಿತ ಅಧಿಕೃತ ಪ್ರಾಧಿಕಾರದ ಜಂಟಿ ಹೆಸರಿನಲ್ಲಿ ನಿರ್ವಹಿಸಿ ಕಾಲಕಾಲಕ್ಕೆ ನವೀಕರಣ ಮಾಡಿಸಿರಬೇಕು.
7. ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಎಸ್ ಎಲ್ ಬಿ 207 ದಿನಾಂಕ: 03–09–2007 ರ ಅನುಬಂಧ 3 ರಲ್ಲಿನ ಚೆಕ್ಲಿಸ್ಟ್ ನಂತೆ ಎಲ್ಲಾ ಮಾಹಿತಿ ದಾಖಲೆಗಳನ್ನು ಹೆ. ಕೃದ್ದು ಹಾಗೂ ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರತಕ್ಕದ್ದು.
8. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 74 ವಿವಿಧ 2994 ಬೆಂಗಳೂರು ದಿನಾಂಕ: 14–08–2006 ರ ಸೂಚನೆಗಳಂತೆ ಲೆಕ್ಕ ಪತ್ರಗಳು, ದಾಖಲೆಗಳನ್ನು ನಿರ್ವಹಿಸಿರಬೇಕು.
9. ಸರ್ಕಾರಿ ಆದೇಶ ಸಂಖ್ಯೆ ಇಡಿ28 ಪಿಜಿಸಿ 1994 ಬೆಂಗಳೂರು ದಿನಾಂಕ: 29–04–1994, ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ165 ಪಿಜಿಸಿ 2004 ದಿನಾಂಕ: 03–01– 2005, ಮಾನ್ಯ ಆಯುಕ್ತರ ಸುತ್ತೋಲೆ ಸಂಖ್ಯೆ ಸಿ7(7)ಪ್ರಾಶಿಅ/ಇತರೆ/57/2992–03 ದಿನಾಂಕ: 12–02–2004 ಮತ್ತು 19–02–2005 ಮತ್ತು 27(3)ಪ್ರಾಶಿಅ/ನೋಂದಣಿ–132/2005–96 ದಿ: 8–03–2006 ಮತ್ತು ಸರ್ಕಾರದ ಆದೇಶ ಸಂಖ್ಯೆ ಇಡಿ28 ಪಿಜಿಸಿ 94 ಜೆಂಗಳೂರು.

10. 29-04-1994 ಮತ್ತು 30-95-2095, ಸರ್ಕಾರದ ಆದೇಶ ಸಂಖ್ಯೆ : ಇಡಿ 1901 ಡಿಜಿಪಿ 79 ಬೆಂಗಳೂರು, ದಿನಾಂಕ:07-98-2000 ರನ್ವಯ ಭಾಷಾ ನೀತಿಯನ್ನು ಕಡ್ಡಾಯವಾಗಿ ಅನುಸರಿಸಲು ಸೂಚಿಸಿದೆ.

11. ಸರ್ಕಾರಿ ಆದೇಶ ಸಂಖ್ಯೆ ಇಡಿ 113 ಎಸ್.ಇಎಸ್ 2005 ಬೆಂಗಳೂರು, ದಿನಾಂಕ 20ನೇ ಮಾರ್ಚ್ 2005 ರ ಸೂಚನೆಗಳನ್ವಯ ಸದರಿ ಹೆಚ್ಚುವರಿ ವಿಭಾಗಗಳಿಗೆ ಅನುಗುಣವಾಗಿ ಮೂಲಭೂತ ಸೌಕರ್ಯ, ಶಿಕ್ಷಕರ ನೇಮಕಾತಿ ಹಾಗೂ ಇನ್ನಿತರೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿರಬೇಕು.

12. ಇಲಾಖಾ ನಿಯಮಾನುಸಾರ ನಿಗಧಿತ ಹಾಗೂ ಹಾಗೂ ಅರ್ಹ ಅರ್ಹ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡಿರಬೇಕು. ನಿಯಮಾನುಸಾರ ನಿಗದಿತ ಅರ್ಹತೆ ಹೊಂದದೇ ಇರುವ ಶಿಕ್ಷಕರನ್ನೇನಾದರೂ ನೇಮಕಾತಿ ಮಾಡಿಕೊಂಡಿದ್ದಲ್ಲಿ ಕೂಡಲೇ ಕೆಲಸದಿಂದ ತೆಗೆದು ಹಾಕಿ ಅರ್ಹ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ನೇಮಿಸಿಕೊಳ್ಳುವುದು.

13. ಶಾಲೆಯಲ್ಲಿ ನೇಮಕಾತಿ ಮಾಡಿಕೊಳ್ಳುವ ಪ್ರತಿಯೊಬ್ಬ ಭೋದಕ/ಬೋದಕೇತರ ಸಿಬ್ಬಂದಿಗೂ ಸರ್ಕಾರದ ಅದಿಸೂಚನೆ ಸಂಖ್ಯೆ ಇಡಿ.104 ಎಸ್.ಇಪಿ.2005 ದಿ. 12-01-2006 ರ ಸೂಚನೆಗಳನ್ವಯ ಸೇವಾ ವಿವರಗಳನ್ನೊಳಗೊಂಡ ಸೇವಾ ವಹಿಗಳನ್ನು ತೆರೆದು ಕಾಲಕಾಲಕ್ಕೆ ನಮೂದನೆಗಳನ್ನು ನಮೂದಿಸಿ ದೃಢೀಕರಿಸಿರುವುದು.

14. ಶಿಕ್ಷಕರಿಗೆ ಸರ್ಕಾರಿ ಆದೇಶಗಳಂತೆ ವೇತನಗಳನ್ನು ಬ್ಯಾಂಕ್ ಉಳಿತಾಯ ಖಾತೆಗಳ ಮೂಲಕ ಪಾವತಿ ಮಾಡುತ್ತಿರುವ ಬಗ್ಗೆ ಹಾಗೂ ಯಾವುದೇ ಕಾರಣಕ್ಕೆ ನಗದು ನೀಡದಿರುವ ಬಗ್ಗೆ ಖಚಿತಪಡಿಸಿಕೊಂಡು ಸೇವಾಬದ್ರತೆ ನೀಡಿರುವ ಬಗ್ಗೆ ವರದಿಯಲ್ಲಿ ನಮೂದಿಸಿದ್ದಾರೆಯೇ? ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಮತ್ತು ಸಿಬ್ಬಂದಿಯವರಿಗೆ ದಿನಾಂಕ 12.01.2006 ರ ಸರ್ಕಾರದ ಆದೇಶದಂತೆ ಸೇವಾಬದ್ರತೆ ಒದಗಿಸಬೇಕು ಹಾಗೂ ಬ್ಯಾಂಕ್ ಮೂಲಕ ವೇತನವನ್ನು ಪಾವತಿಸಬೇಕು.

15. ಈ ಶಾಲೆ ಪ್ರಾರಂಭವಾದಗಿನಿಂದ ಸಂಸ್ಥೆ ಹಸ್ತಾಂತರ ಹಾಗೂ ಶಾಲೆ ಸ್ಥಳಾಂತರವಾಗಿದ್ದಲ್ಲಿ ಶಿಕ್ಷಣ ಕಾಯ್ದೆಯನುಸಾರ ಸದರಿ ಶಾಲೆಗೆ ಹೊಸದಾಗಿ ನೊಂದಣಿ ಪ್ರಥಮ ಮಾನ್ಯತೆ ಹಾಗೂ ಕಾಲಕಾಲಕ್ಕೆ ಮಾನ್ಯತೆಗಳನ್ನು ಪಡೆದಿರಬೇಕು.

16. ಪೋಲಿಸ್ ಆಯುಕ್ತರು, ಬೆಂಗಳೂರು ಇವರ ಆದೇಶ ಸಂಖ್ಯೆ: 157/ ಎಂಎಜಿ (1) ಇತರೆ /2014 ದಿನಾಂಕ: 26-07-2014ರ ಸೂಚನೆಗಳನ್ವಯ ಮಾನ್ಯ ಪೋಲಿಸ್ ಆಯುಕ್ತರು ಶಾಲೆಯಲ್ಲಿ ಮಕ್ಕಳ ಸುರಕ್ಷತಾ ಹಿತದೃಷ್ಠಿಯಿಂದ 09 ಅಂಶಗಳ ಬಗ್ಗೆ ಮಾರ್ಗಸೂಚಿಗಳನ್ನು ಕೈಗೊಳ್ಳಲು ಶಾಲಾ ಆಡಳಿತ ಮಂಡಳಿಗಳಿಗೆ ನೀಡಿರುವ ಸೂಚನೆಗಳನ್ವಯ ಕ್ರಮ ಜರುಗಿಸಿರಬೇಕು.

17. ಆರ್.ಟಿ.ಇ. ಅಡಿಯಲ್ಲಿ ಸದರಿ ಶಾಲೆ ನೋಂದಣಿಯಾಗಿರಬೇಕು.

18. ಶಾಲಾ ಮಕ್ಕಳಿಗೆ ಯಾವುದೇ ದೈಹಿಕ ದಂಡನೆಗಳನ್ನು ನೀಡಬಾರದು.

19. ಅಗ್ನಿನಂದಕಗಳನ್ನು ಅಳವಡಿಸಿರುವ ಬಗ್ಗೆ ಪರಿಶೀಲಿಸಿ ಬೇಟಿ ವರದಿಯಲ್ಲಿ ನಮೂದಿಸತಕ್ಕದ್ದು. ಶಾಲಾ ಕಟ್ಟಡವನ್ನು ಬೆಂಕಿ ಹಾಗೂ ವಿದ್ಯುತ್ ಅವಘಡಗಳಿಂದ ಮುಕ್ತ ಮಾಡಲು ಮುನ್ನೆಚರಿಕೆ ಕ್ರ ಕ್ರಮ ತೆಗೆದುಕೊಳ್ಳತಕ್ಕದ್ದು ಹಾಗೂ ಅಗ್ನಿ ಶಾಮಕಗಳನ್ನು ಅಳವಡಿಸುವುದು ಮತ್ತು ಕಟ್ಟಡದ ಸುರಕ್ಷತೆಯ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ-483/04 ದಿನಾಂಕ:13/04/2009 ರಲ್ಲಿ ನೀಡಿರುವ ನಿರ್ದೇಶನಗಳನ್ನು ತಪ್ಪದೆ ಪಾಲಿಸುವುದು.

20. ಶಾಲೆಯ 200 ಮೀಟರ್ ಸುತ್ತಳತೆಯಲ್ಲಿ ಧೂಮಪಾನ ನಿಷೇದ ಪ್ರಕಟಣ ಫಲಕವನ್ನು ಖಡ್ಡಾಯವಾಗಿ ಹಾಕಬೇಕು.

21. ಶಾಲಾ ವಾಹನಗಳ ನಿರ್ವಹಣೆಯ ಸಂಬಂಧದಲ್ಲಿ ಸಾರಿಗೆ ಇಲಾಖೆರವರು ಹೊರಡಿಸಿರುವ ಆದೇಶದಲ್ಲಿನ ಸೂಚನೆಗಳನ್ನು ಪಾಲಿಸತಕ್ಕದ್ದು.

22. ಶಾಲೆಯ ಮೇಲಿನ ಅಂತಸ್ತುಗಳಿಗೆ ಹೋಗಬೇಕಾದ ಮೆಟ್ಟಿಲುಗಳು ಕಿರಿದು ಆಗಿರಬಾರದು. ಒಂದು ವೇಳೆ ಪ್ರತಿ ಮಜಲುಗಳಲ್ಲಿ ಸುರಕ್ಷಿತ ಗೋಡೆಗಳನ್ನು ನಿರ್ಮಿಸದಿದ್ದಲ್ಲಿ ಅಥವಾ ತುಂಬಾ ಚಿಕ್ಕದಾದ ಗೋಡೆಗಳನ್ನು ನಿರ್ಮಾಣ ಮಾಡಿದ್ದಲ್ಲಿ ಈ ಬಗ್ಗೆ ಜಾಗರೂಕತಾ ಕ್ರಮ ಕೈಗೊಳ್ಳಬೇಕು. ಕೊನೆಯ ಪಕ್ಷ 5 ಅಡಿ ತಡೆ ಗೋಡೆಗಳು ಇರುವಂತೆ ನೋಡಿಕೊಳ್ಳಬೇಕು. ಕೊಠಡಿಗಳ ಬೆಳಕಿನ ವ್ಯವಸ್ಥೆಗೆ: ಅಡ್ಡಿ ಉಂಟಾಗದಂತೆ ಗಿಲ್‌ಗಳನ್ನು ಅಳವಡಿಸಬೇಕು. ಈ ಮೇಲ್ಕಂಡ ಎಲ್ಲಾ ಷರತ್ತುಗಳನ್ನು ಪಾಲಿಸಿದ್ದಲ್ಲಿ ಮಾತ್ರ ಈ ಮಾನ್ಯತೆ ಅನ್ವಯಿಸುತ್ತದೆ. ತಪ್ಪಿದಲ್ಲಿ ತಂತಾನೆ ರದ್ದಾಗುತ್ತದೆ.

23. 1 ರಿಂದ 5ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಬೋಧನೆ ಮಾಡಲು ಶಿಕ್ಷಕರು ಕಡ್ಡಾಯವಾಗಿ Teacher Eligibility Test (TET) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. (ದಿನಾಂಕ : 09-06-2014 ರಿಂದ ಜಾರಿಗೆ ಬರುತ್ತದೆ) ಹಾಗೂ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಶಿಕ್ಷಕರನ್ನೇ ಆಡಳಿತ ಮಂಡಳಿಯವರು ನೇಮಕಾತಿ ಮಾಡಿಕೊಳ್ಳತಕ್ಕದ್ದು.

24. ಕರ್ನಾಟಕ ಶಿಕ್ಷಣ ಸಂಸ್ಥೆಗಳ ನಿಯಮ -2018 ರ ನಿಯಮ 5ಎ ಮತ್ತು ನಿಯಮ-7 ರ ಷೆಡ್ಯೂಲ್ ಪ್ರಕಾರ ಮಕ್ಕಳ ಸುರಕ್ಷತೆ ಕ್ರಮಗಳು ಹಾಗೂ ಇತರೆ ಎಲ್ಲಾ ನಿಯಮಗಳನ್ನು ಪಾಲಿಸುವುದು.

25. ಶುಲ್ಕಗಳ ಪಟ್ಟಿಯನ್ನು ಶಾಲೆಯ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸುವುದು ಹಾಗೂ ಕನ್ನಡವನ್ನು ಕಡ್ಡಾಯವಾಗಿ ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಬೋಧಿಸುವುದು.

26. ಕರ್ನಾಟಕ ಶಿಕ್ಷಣ ಸಂಸ್ಥೆಗಳು ಮಾನ್ಯತೆ ನಿಯಮಗಳು 1999 ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 131 ವಿವಿಧ 98 ದಿನಾಂಕ: 94-11-99ರ ನಿಯಮ 4 (#) ರ - ಪ್ರಕಾರ ವಿದ್ಯಾರ್ಥಿಗಳ ಕನಿಷ್ಟ ದಾಖಲಾತಿಯನ್ನು ನಿರ್ವಹಿಸಿರಬೇಕು. ಪ್ರತಿ ವರ್ಷವು ನಿಗಧಿತ ದಾಖಲಾತಿ/ಹಾಜರಾತಿಯನ್ನು ಕಾಯ್ದುಕೊಂಡು ಇಲಾಖಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.

27. ಕರ್ನಾಟಕ ಶಿಕ್ಷಣ ಕಾಯ್ದೆಯನ್ವಯ ಎಲ್ಲಾ ಮಾನ್ಯತೆ ನಿಯಮಗಳನ್ನು ಪಾಲಿಸುವುದು ಹಾಗೂ ಯಾವುದೇ ಸುಳ್ಳು ಮಾಹಿತಿಗಳನ್ನು ನೀಡಿರಬಾರದು, ತಪ್ಪಿದಲ್ಲಿ ನಿಯಮಾನುಸಾರ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲಾಗುವುದು. ನೋಂದಣಿ ಹಾಗೂ ಮಾನ್ಯತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.

(ರಾಮಮೂರ್ತಿ ಡಿ.ಆರ್.)
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ

ಇವರಿಗೆ

1. ಕಾರ್ಯದರ್ಶಿಗಳು, ಲರ್ನಿಂಗ್ ಲೀಡರ್‌ಶಿಪ್ ಫೌಂಡೇಶನ್ (ರಿ) ನಂ.16, 80 ಅಡಿ ರಸ್ತೆ, 4ನೇ ಬ್ಲಾಕ್, ಕೋರಮಂಗಲ, ಬೆಂಗಳೂರು -560034
2. ಮುಖ್ಯೋಪಾಧ್ಯಾಯರು, ಪಿಎಸ್‌ಬಿಬಿ ಲರ್ನಿಂಗ್ ಲೀಡರ್‌ಶಿಪ್ ಅಕಾಡೆಮಿ ಸರ್ವೆ ನಂ.52, ಲಕ್ಷ್ಮೀಪುರ ವಿಲೇಜ್, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು
3. ಕಛೇರಿ ಪ್ರತಿ